# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## *ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕಃ 31-05-2019ರಂದು ನಡೆದ ಸಭೆಯ ನಡವಳಿಗಳು*

| ಹಾಜರಿದ್ದ ಸದಸ್ಯರುಗಳು | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|
| **ಶ್ರೀಯುತರು,** | | |
| ಎಸ್.ಪಿ. ಹೇಮಲತಾ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಎಂ. ಆನಂದ | ಸದಸ್ಯರು | ಮುಖ್ಯ ಲೆಕ್ಕಾಧಿಕಾರಿ |
| ಬಿ.ಎನ್. ನಿತೀಶ್‌ಪುರುಷೋತ್ತಮ | ಸದಸ್ಯರು | ಉಪ ನಿಯಂತ್ರಕರು (ಹಣಕಾಸು), |
| ಲತ ಕುವರ್ ರಾಥೋಡ್. ಆರ್.ಜೆ | ಸದಸ್ಯರು | ಕಾರ್ಯಪಾಲಕ ಅಭಿಯಂತರರು(ದಾಸರಹಳ್ಳಿ) |
| ಬಾಲಕೃಷ್ಣನ್. ಜಿ | ಸದಸ್ಯರು | ಸಹಾಯಕ ಕಾನೂನು ಅಧಿಕಾರಿ, |
| ಅಜ್ಮಲ್ ಬೇಗ್ | ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು, |
| ಭಾರತಿ ರಾಮಚಂದ್ರ | ಸದಸ್ಯರು | --- |
| ಮೋಹನ್‌ಕುಮಾರ್ | ಸದಸ್ಯರು | --- |
| ಕೆ. ಸೋಮಶೇಖರ್ | ಸದಸ್ಯರು | --- |
| ಎಲ್. ಶ್ರೀನಿವಾಸ | ಸದಸ್ಯರು | --- |
| ವಿ. ಶಿವಪ್ರಕಾಶ್ | ಸದಸ್ಯರು | --- |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

### *01). ವಿಷಯದ ಸಂಖ್ಯೆಃ ತೆಆಸ್ಥಾಸ/ 237 /2018-19*

***ಮುಖ್ಯ ಅಬಿಯಂತರರು (ಪ್ರಭಾರ) ರವರ ದಿನಾಂಕ: 02-03-2019 ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *2017-18ನೇ ಸಾಲಿನ ಪಾಲಿಕೆಯ ಪಶ್ಚಿಮ ವಲಯದ ವಾರ್ಡ್ ಸಂಖ್ಯೆ 96ರ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ ಪಿ0485ರ ಅನುದಾನದ ಅಡಿಯಲ್ಲಿ ಜಾಬ್‌ಸಂಖ್ಯೆ ಪಡೆದಿದ್ದು. ವಿವರಗಳು ಈ ಕೆಳಕಂಡಂತೆ ಇರುತ್ತದೆ.*

| ಕ್ರ.ಸಂ | ಕಾಮಗಾರಿಗಳ ವಿವರ | ಜಾಬ್‌ಕೋಡ್ ಸಂಖ್ಯೆ | ಅಂದಾಜು ಪಟ್ಟಿ (ರೂ.ಲಕ್ಷಗಳಲ್ಲಿ) |
|---|---|---|---|
| 1 | Development of Hindu Burial Ground ward No.96 C caregory | 096-18-000014 | 25.00 |

*ಮೇಲ್ಕಾಣಿಸಿದ ಕಾಮಗಾರಿ ddo-599 Chief Engineer Project-ICentral Zone ರವರಿಗೆ ದಿನಾಂಕ: 29-01-2018 ರಂದು ನೀಡಲಾಗಿರುತ್ತದೆ.*

*ಅದರಂತೆ, ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆ: 39/2017-18, ದಿನಾಂಕ: 17-03-2018 ರಂದು ನಡೆದ ಸಭೆಯಲ್ಲಿ ಮೆ॥.ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ಅನುಷ್ಠಾನಗೊಳಿಸಲು ನಿರ್ಣಾಯಿಸಲಾಯಿತು. ಪಾಲಿಕೆಯ ಸದಸ್ಯರಾದ ಶ್ರೀ. ವಿ. ಶಿವಪ್ರಕಾಶ್ ರವರು ಮಾನ್ಯ ಆಯುಕ್ತರು ರವರಿಗೆ ಮನವಿ ಸಲ್ಲಿಸಿ ಕಾರ್ಯಪಾಲಕ ಅಭಿಯಂತರರು (ಯೋಜನೆ-ಪಶ್ಚಿಮ) ddo-599 Chief Engineer Project-ICentral Zone ಬದಲಾಗಿ ddo193 ಕಾರ್ಯಪಾಲಕ ಅಭಿಯಂತರರು (ಗಾಂಧಿನಗರ ವಿಭಾಗ) ರವರ ಕಛೇರಿಯಿಂದಲೇ ನಿರ್ವಹಿಸಬೇಕೆಂದು ಕೋರಿರುತ್ತಾರೆ.*

*ಮುಖ್ಯ ಆರ್ಥಿಕ ಅಧಿಕಾರಿ ರವರು ವರದಿ ಮಾಡಿರುವಂತೆ ಪ್ರಸ್ತಾಪಿತ ಕಾಮಗಾರಿಗೆ 2017–18ರ ಪಿ–0485 ಅಡಿ ರೂ.161.28 ಲಕ್ಷಗಳಿಗೆ ddo-599 ರವರಿಗೆ 096–18–000014 ಜಾಬ್‌ಸಂಖ್ಯೆ ನೀಡಲಾಗಿದೆ. 2018–19ರ ಪಿ–0485ರ Spillover or Pendings ಅಡಿ ಯಾವುದೇ ಅನುದಾನ ಮೀಸಲಿರಿಸಿರುವುದಿಲ್ಲ, 2018–19ರ ಪಿ–0485ರ Spillover ಅಡಿ ಅನುದಾನ ಒದಗಿಸಿಕೊಂಡು, ಬದಲಿ ddo-193 ಕಾರ್ಯಪಾಲಕ ಅಭಿಯಂತರರರು (ಗಾಂಧಿನಗರ ವಿಭಾಗ) ರವರಿಗೆ ಜಾಬ್ ಕೋಡ್ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಬಹುದಾಗಿದೆ ಎಂದು ಅಬಿಪ್ರಾಯಿಸಿದ್ದು, ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ರವರು ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ಒಪ್ಪಿಗೆ ನೀಡಿರುತ್ತಾರೆ.*

*ಈ ಹಿನ್ನಲೆಯಲ್ಲಿ ಮೇಲ್ಕಂಡ ಉಲ್ಲೇಖದಡಿಯಲ್ಲಿ ಮಾನ್ಯ ಆಯುಕ್ತರು ರವರು ಆದೇಶಿಸಿದಂತೆ 2017–18ನೇ ಸಾಲಿನಲ್ಲಿ ನಿಗಧಿಪಡಿಸಿದ ಅನುದಾನಕ್ಕೆ ಮೇಲ್ಕಾಣಿಸಿದ ಕಾಮಗಾರಿಯ ಅಂದಾಜು ಮೊತ್ತವಾದ ರೂ.161.28 ಲಕ್ಷಗಳನ್ನು 2018–19ನೇ ಸಾಲಿನ ಲೆಕ್ಕಶೀರ್ಷಿಕೆ ಪಿ0485ರ ಅಡಿಯಲ್ಲಿ ಚಾಲ್ತಿ ಕಾಮಗಾರಿಗಳ ಅಡಿಯಲ್ಲಿ ಅಳವಡಿಸಿಕೊಂಡು ಹಾಗೂ ಸದರಿ ಜಾಬ್ ಸಂಖ್ಯೆ ಪ್ರಮಾಣ ಪತ್ರದಲ್ಲಿ ddo-193 ಕಾರ್ಯಪಾಲಕ ಅಭಿಯಂತರರು (ಗಾಂಧಿನಗರ ವಿಭಾಗ) ರವರಿಗೆ ನಮೂದಿಸಿ ಹೊಸ ಜಾಬ್ ಕೋಡ್ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.*

***ನಿರ್ಣಯ: ಪ್ರಧಾನ ಅಭಿಯಂತರರ ದಿನಾಂಕ: 02–03–2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

*ವಿಷಯದ ಸಂಖ್ಯೆ: ತೆಆಸ್ಥಾಸ/ 238 /2018–19*

***ಮುಖ್ಯ ಅಬಿಯಂತರರು (ಪ್ರಭಾರ) ರವರ ದಿನಾಂಕ: 02–03–2019 ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ಪಾಲಿಕೆಯ ದಾಸರಹಳ್ಳಿ ವಲಯದ ವಾರ್ಡ್ ಸಂಖ್ಯೆ:12 ಕ್ಕೆ ಅನುಮೋದಿಸಿದ ಕಾಮಗಾರಿಯನ್ನು ರದ್ದುಪಡಿಸಿ, ಪಾಲಿಕೆ ಸದಸ್ಯರು ಪ್ರಸ್ತಾಪಿಸಿದ ಬದಲಿ ಕಾಮಗಾರಿಗೆ ಮೇಲ್ಕಂಡ ಉಲ್ಲೇಖ (1) ರ ಅಡಿಯಲ್ಲಿ ಮಾನ್ಯ ಆಯುಕ್ತರು ರವರ ಆದೇಶದಂತೆ 2018–19ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ–2271 ರ (Road Deveopmental works in Dasarahalli Assembly Constituency) ಬದಲಿ ಕಾಮಗಾರಿಗೆ ಜಾಬ್ ಸಂಖ್ಯೆ ನೀಡಿದ್ದು, ಕಾಮಗಾರಿಯ ವಿವರಗಳು ಈ ಕೆಳಕಂಡಂತಿರುತ್ತದೆ.*

| ಕ್ರ.ಸಂ | ಅನುಮೋದಿತ ಕಾಮಗಾರಿಯ ಹೆಸರು | ಬದಲಿ ಕಾಮಗಾರಿಯ ಹೆಸರು |
|---|---|---|
| 1 | *Asphalting to Medarahalli road from Shettyhalli Gate Palya to Ragavendra Railways Gate in Shettyhalli Sub Division* | *Asphalting to Dodda Muniyappa and New Appayyanna Layout Roads behind Ashoka International School, KG Halli main road in Ward No.12*<br><br>*Est. Cost Rs.60.00 Lakhs*<br>*Job Code No:012-12-000024* |

*ಮುಖ್ಯ ಆರ್ಥಿಕ ಲೆಕ್ಕಾಧಿಕಾರಿಗಳು ರವರು ವರದಿ ಮಾಡಿರುವಂತೆ, ಮಾನ್ಯ ಆಯುಕ್ತರು ರವರ ಆದೇಶದಂತೆ, ಈ ಹಿಂದೆ ಅನುಮೋದಿತ ಕಾಮಗಾರಿಗೆ ನೀಡಲಾಗಿದ್ದ ಜಾಬ್ ಸಂಖ್ಯೆಯನ್ನು ರದ್ದುಪಡಿಸಿ, ಅದೇ ಜಾಬ್ ಸಂಖ್ಯೆಗೆ ಮೇಲ್ಕಾಣಿಸಿದ ಬದಲಿ ಕಾಮಗಾರಿಗೆ ನಮೂದಿಸಿ, ಜಾಬ್ ಕೋಡ್:012–12–000024 ನೀಡಲಾಗಿದೆ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸ್ಥಿರೀಕರಣಕ್ಕಾಗಿ ಕಡತವನ್ನು*

ಸಲ್ಲಿಸಲು ಅಭಿಪ್ರಾಯಿಸಿದ್ದು, ಮೇಲ್ಕಂಡ ಉಲ್ಲೇಖ (2) ರ ಅಡಿಯಲ್ಲಿ ಮಾನ್ಯ ಆಯುಕ್ತರು ರವರು ಪ್ರಸ್ತಾವನೆಯನ್ನು ಸ್ಥಿರೀಕರಿಸಲು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲು ಒಪ್ಪಿಗೆ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಮಾನ್ಯ ಆಯುಕ್ತರು ರವರು ಆದೇಶಿಸಿಂತೆ, ಸದರಿ ಬದಲಿ ಕಾಮಗಾರಿಗೆ ಪಿ–2271 ರ ಅಡಿಯಲ್ಲಿ Asphalting to Dodda Muniyappa and New Appayyanna Layout Roads behind Ashoka International School, KG Halli main road in Ward No.12 ಕಾಮಗಾರಿಯ ಅಂದಾಜು ಮೊತ್ತವಾದ ರೂ.60.00 ಲಕ್ಷಗಳಿಗೆ ನೀಡಿರುವ ಬದಲಿ ಜಾಬ್ ಕೋಡ್ (012–12–000024) ಕ್ರಮವನ್ನು ಸ್ಥಿರೀಕರಿಸಲು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಪ್ರಧಾನ ಅಭಿಯಂತರರು (ಪ್ರಭಾರ) ರವರ ದಿನಾಂಕ: 02–03–2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## ವಿಷಯದ ಸಂಖ್ಯೆಃ ತೆಆಸ್ಥಾಸ/ 239 /2018–19

**ಆಯುಕ್ತರ ದಿನಾಂಕ: 01–03–2019 ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಅಖಿಲ ಕರ್ನಾಟಕ ಕನ್ನಡ ಚಳುವಳಿ ಕೇಂದ್ರ ಸಮಿತಿ (ರಿ) ನಂ–620, 13ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ಎಂ.ಸಿ ಬಡಾವಣೆ, ವಿಜಯನಗರ ಬೆಂಗಳೂರು–560040 ರವರು 2017–18ನೇ ಸಾಲಿನ ಅನುಮೋದಿತ ಆಯವ್ಯಯದಲ್ಲಿ ಮೀಸಲಿರಿಸಿರುವ ಮೊತ್ತ ರೂ.5.00 ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.

ಕಂಡಿಕೆ 37ರಲ್ಲಿ ಮಾನ್ಯ ಆಯುಕ್ತರು ಸದರಿ ಸಂಸ್ಥೆಯಾದ ಅಖಿಲ ಕರ್ನಾಟಕ ಕನ್ನಡ ಚಳುವಳಿ ಕೇಂದ್ರ ಸಮಿತಿ (ರಿ.) ರವರಿಗೆ 2017–18ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ ರೂ.5.00 ಲಕ್ಷಗಳ ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ಹಿಂಬರಹ ಜಾರಿ ಮಾಡಲು ಆದೇಶಿಸಿರುತ್ತಾರೆ. ಸದರಿ ಸಂಸ್ಥೆಗೆ ದಿನಾಂಕ:–18/02/2019ರಂದು ಈ ಕಛೇರಿಯಿಂದ ಹಿಂಬರಹ ಜಾರಿ ಮಾಡಲಾಗಿದೆ. ಈ ಕಛೇರಿಯಿಂದ ಜಾರಿ ಮಾಡಲಾದ ಹಿಂಬರಹಕ್ಕೆ ಸದರಿ ಸಂಸ್ಥೆಯವರು ಮಾನ್ಯ ಮಹಾಪೌರರಿಗೆ ದಿನಾಂಕ: 19/02/2019ರಂದು 2017–18ನೇ ಸಾಲಿನ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಮಂಜೂರಾದ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಮಾನ್ಯ ಮಹಾಪೌರರ ಪತ್ರದ ಸಂಖ್ಯೆ:ಎಂಪಿಎಸ್/ಪಿಆರ್/484/2018–19 ದಿನಾಂಕ:19/02/2018ರಲ್ಲಿ ಆಯುಕ್ತರವರಿಗೆ ಪತ್ರ ನೀಡಿದ್ದು, 2017–18ನೇ ಸಾಲಿನಲ್ಲಿ ರೂ.5.00 ಲಕ್ಷಗಳನ್ನು ಮಂಜೂರು ಮಾಡಲಾಗಿದ್ದು, ಈ ಸಂಬಂಧವಾಗಿ ಕಡತವು ಚಾಲನೆಯಲ್ಲಿದ್ದು, ಇದುವರೆಗೂ ಹಣ ಬಿಡುಗಡೆಯಾಗಿರುವುದಿಲ್ಲ. ಮಂಜೂರಾದ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ. ಸದರಿ ಪತ್ರದಲ್ಲಿ ಮಾನ್ಯ ಆಯುಕ್ತರು ಮುಂದಿನ ಕ್ರಮಕ್ಕಾಗಿ ಅನುದಾನ ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲು ಸೂಚಿಸಿರುವ ಮೇರೆಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ ಸಿದ್ದಪಡಿಸಿ 2017–18ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ರೂ.5.00 ಲಕ್ಷಗಳನ್ನು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ಜಂಟಿ ಆಯುಕ್ತರು (ಪಶ್ಚಿಮ)ರವರು ಶಿಫಾರಸ್ಸು ಮಾಡಿರುವ ಮೇರೆಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2017–18ನೇ ಸಾಲಿನ ಆಯವ್ಯಯ ಅವಧಿಯು ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಕೈಬಿಡುವುದೆಂದು ಸಮಿತಿಯು ತೀರ್ಮಾನಿಸಿತು.**

## ಹೆಚ್ಚುವರಿ ವಿಷಯಗಳು:-

## ವಿಷಯದ ಸಂಖ್ಯೆ: ತೆಆಸ್ಥಾಸ/ 240 /2018-19

***ಮುಖ್ಯ ಅಭಿಯಂತರರು (ಪ್ರಭಾರ) ರವರ ದಿನಾಂಕ: 02-03-2019 ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ಮುಖ್ಯ ಅಭಿಯಂತರರು (ಪೂರ್ವ) ರವರು ಕಂಡಿಕೆ (18) ಕಾಮಗಾರಿಯಾದ Improvements to RCC secondary drain at Hasikaraga Mantapa ward No.110 ಗೆ ರೂ.10.00 ಲಕ್ಷಗಳ ಮೊತ್ತವನ್ನು 2017-18ನೇ ಸಾಲಿನ 14ನೇ ಹಣಕಾಸು ಅನುದಾನದಲ್ಲಿ ಜಾಬ್ ಕೋಡ್ ನೀಡಲು ಕೋರಿರುತ್ತಾರೆ. ಮುಖ್ಯ ಆರ್ಥಿಕ ಅಧಿಕಾರಿ ರವರು ಕಂಡಿಕೆ (16) ರಲ್ಲಿ 2018-19ನೇ ಸಾಲಿನ ಆಯವ್ಯಯವು ಚಾಲ್ತಿಯಲ್ಲಿದ್ದು, 2017-18ನೇ ಸಾಲಿನ 14ನೇ ಹಣಕಾಸು ಆಯೋಗದ ಅನುದಾನದಲ್ಲಿ ಬಿಡುಗಡೆ ಮಾಡಲು ಸಮಿತಿಯ ಮುಂದೆ ಮಂಡಿಸಲು ವರದಿ ಸಲ್ಲಿಸಿರುತ್ತಾರೆ. ಈ ವಿಚಾರದಲ್ಲಿ ಮುಖ್ಯ ಲೆಕ್ಕಾಧಿಕಾರಿ ರವರು ಕಂಡಿಕೆ (22) ರಲ್ಲಿ 2017-18ನೇ ಸಾಲಿನ ಅನುದಾನದ ಅಡಿಯಲ್ಲಿ ಅನುಮೋದಿತವಾಗಿರುವ ಕಾಮಗಾರಿಯನ್ನು 2017-18ನೇ ಸಾಲಿಗೆ ಕೈಗೆತ್ತಿಕಕೊಂಡು ಜಾಬ್ ಸಂಖ್ಯೆ ನೀಡಲು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಬಹುದೆಂದು ವರದಿ ಸಲ್ಲಿಸಿರುತ್ತಾರೆ.*

*ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರು ರವರ ಆದೇಶದಂತೆ ಕಾಮಗಾರಿಯಾದ Improvements to RCC secondary drain at Hasikaraga Mantapa ward No.110 ಗೆ ರೂ.10.00 ಲಕ್ಷಗಳ ಮೊತ್ತವನ್ನು 2017-18ನೇ ಸಾಲಿನ 14ನೇ ಹಣಕಾಸು ಅನುದಾನದ ಲೆಕ್ಕಶೀರ್ಷಿಕೆ ಪಿ-3297ರ ಅಡಿಯಲ್ಲಿ 2018-19ನೇ ಸಾಲಿಗೆ ಕೈಗೆತ್ತಿಕೊಂಡು ಜಾಬ್ ಕೋಡ್ ನೀಡಲು ಸಮಿತಿಯ ಮುಂದೆ ಅನುಮೋದನೆ ಕೋರಿ ಮಂಡಿಸಲಾಗಿರುವ ಟಿಪ್ಪಣಿ.*

***ನಿರ್ಣಯ: ಪ್ರಧಾನ ಅಭಿಯಂತರರ ದಿನಾಂಕ: 02-03-2019ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.***

## ವಿಷಯದ ಸಂಖ್ಯೆ: ತೆಆಸ್ಥಾಸ/ 241 /2018-19

***ಮುಖ್ಯ ಅಭಿಯಂತರರು (ಪ್ರಭಾರ) ರವರ ದಿನಾಂಕ: 02-03-2019 ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ಮುಖ್ಯ ಅಭಿಯಂತರರು (ಯೋಜನೆ-ಕೇಂದ್ರ) ರವರು ಕಾಮಗಾರಿಯಾದ Providing Emergency relief task force team to Head Office control room at BBMP Head office for the year 2018-19 ಗೆ - ರೂ.79.00 ಲಕ್ಷಗಳಿಗೆ ಲೆಕ್ಕ ಶೀಷಿಕೆ ಪಿ-3156 ರ ಅಡಿಯಲ್ಲಿ ಅನುವು ಮಾಡಲು ಕೋರಿದ್ದು, ಈ ವಿಚಾರದಲ್ಲಿ ಮುಖ್ಯ ಆರ್ಥಿಕ ಅಧಿಕಾರಿ ರವರು 2018-19ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-3156ರ ಅಡಿಯಲ್ಲಿ ರೂ.125.00 ಲಕ್ಷಗಳ ಅನುದಾನವನ್ನು ಮೀಸಲಿರಿಸಿದ್ದು, ಈ ಸಂಬಂಧ ಸದರಿ ಮೊತ್ತಕ್ಕೆ ಹಾಗೂ ಹೆಚ್ಚುವರಿ ಮೊತ್ತಕ್ಕೆ ಸೇರಿದಂತೆ ಜಾಬ್ ಸಂಖ್ಯೆ ನೀಡಲಾಗಿದೆ ಮತ್ತು ಲೆಕ್ಕ ಶೀರ್ಷಿಕೆ ಪಿ-3156 ರ ಅಡಿಯಲ್ಲಿ ಅನುದಾನ ಲಭ್ಯವಿರುವುದಿಲ್ಲವೆಂದು ಮತ್ತು ಸಮಿತಿಗೆ ಮರು ಹೊಂದಾಣಿಕೆಯ ಆದೇಶಕ್ಕಾಗಿ ಸಲ್ಲಿಸಲು ವರದಿ ಮಂಡಿಸಿರುತ್ತಾರೆ.*

*ಈ ಹಿನ್ನಲೆಯಲ್ಲಿ ಮಾನ್ಯ ಆಯುಕ್ತರು ರವರ ಆದೇಶದಂತೆ, ಕಾಮಗಾರಿಯಾದ Providing Emergency relief task force team to Head Office control room at BBMP Head office for the year 2018-19ಗೆ ರೂ.79.00 ಲಕ್ಷಗಳಿಗೆ ಮರು ಹೊಂದಾಣಿಕೆ ಸಮಿತಿ ಮುಂದೆ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.*

***ನಿರ್ಣಯ: 2018-19ನೇ ಸಾಲಿನ ಆಯವ್ಯಯ ಅವಧಿಯು ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ 2019-20ನೇ ಸಾಲಿನ ಆಯವ್ಯಯದಲ್ಲಿ ಪರಿಗಣಿಸುವುದೆಂದು ಸಮಿತಿಯು ತೀರ್ಮಾನಿಸಿತು.***

***ವಿಷಯದ ಸಂಖ್ಯೆಃ ತೆಆಸ್ಥಾಸ/ 242 /2018-19***

***ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 05-03-2019 ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ನೇಕಾರರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ (ರಿ.), ನಂ.191/ಎ, 3ನೇ ಇ ಅಡ್ಡರಸ್ತೆ, 2ನೇ ಬ್ಲಾಕ್, 3ನೇ ಹಂತ, ಬಸವೇಶ್ವರನಗರ, ಬೆಂಗಳೂರು-560079 ರವರು 2018-19ನೇ ಸಾಲಿಗೆ ರೂ. 2.00 (ಎರಡು) ಲಕ್ಷಗಳು ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ.*

*ಸದರಿ ಸಂಸ್ಥೆಯವರಿಗೆ 2018-19ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದಿತ ಆಯವ್ಯಯ, ಕೌನ್ಸಿಲ್-1ರ ಪಿಕೋಡ್ 0048, ಅನುಬಂಧ-04ರಲ್ಲಿ, ಕ್ರಮ ಸಂಖ್ಯೆ 71ರಲ್ಲಿ ಮೊತ್ತ ರೂ. 2.00 (ಎರಡು) ಲಕ್ಷಗಳು ಮೀಸಲಿರಿಸಲಾಗಿರುತ್ತದೆ.*

*ಈ ಸಂಬಂಧವಾಗಿ ನೇಕಾರರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ (ರಿ.), 2018-19ನೇ ಸಾಲಿನಲ್ಲಿ ಮೀಸಲಿರಿಸಿರುವ ಸಹಾಯ ಧನ ಮಂಜೂರು ಮಾಡುವ ಬಗ್ಗೆ ಸ್ಥಳೀಯ ಸಹಾಯಕ ಕಂದಾಯ ಅಧಿಕಾರಿಯವರು ಮಹಜರ್, 3 ವರ್ಷದ ಲೆಕ್ಕ ಪರಿಶೋಧನಾ ವರದಿ ಹಾಗೂ ಇತರ ದಾಖಲಾತಿಗಳೊಂದಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಟ್ಟಿರುವ ಮೊತ್ತ 2.00 (ಎರಡು) ಲಕ್ಷಗಳು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗೆ ಮಂಡಿಸಿರುವ ಟಿಪ್ಪಣಿ.*

***ನಿರ್ಣಯ: 2018-19ನೇ ಸಾಲಿನ ಆಯವ್ಯಯ ಅವಧಿಯು ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಕೈಬಿಡುವುದೆಂದು ಸಮಿತಿಯು ತೀರ್ಮಾನಿಸಿತು.***

***ವಿಷಯದ ಸಂಖ್ಯೆಃ ತೆಆಸ್ಥಾಸ/ 243 /2018-19***

***ಆಯುಕ್ತರ ದಿನಾಂಕ: 03-01-2019 ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,*** *ಶ್ರೀ ರೋಹಿತ್ ಆರ್ ಮತ್ತು ಶ್ರೀ ರಾಹುಲ್ ರವರುಗಳು ಸಲ್ಲಿಸಿರುವ ಮನವಿ ಪತ್ರ ದಿನಾಂಕ: 21-09-2018 ರಂದು ಸಲ್ಲಿಸಿರುವ ಮನವಿ ಪತ್ರದಲ್ಲಿ ದಿನಾಂಕ: 08-09-2017ರಂದು ರಾತ್ರಿ ಸುಮಾರು 8:15ರಲ್ಲಿ ಜೆ.ಸಿ. ರಸ್ತೆಯಲ್ಲಿ ಕಾರಿನ ಮೇಲೆ ಮರ ಬಿದ್ದು ನಮ್ಮ ತಂದೆಯವರಾದ ಸುಮಾರು 42 ವರ್ಷ ವಯಸ್ಸುಳ್ಳ ರಮೇಶ್. ಟಿ.ಎ ಮತ್ತು ನಮ್ಮ ತಾಯಿಯವರಾದ ಸುಮಾರು 38 ವರ್ಷ ವಯಸ್ಸುಳ್ಳ ಶ್ರೀಮತಿ ಭಾರತಿ ಇವರು ಸಹ ಮರಣ ಹೊಂದಿರುತ್ತಾರೆ.*

*ಇವರ ಮಕ್ಕಳಾದ ಶ್ರೀ ರೋಹಿತ್, ಆರ್. 20 ವರ್ಷ ರವರು ಬಿ.ಕಾಂ. ವಿದ್ಯಾಭ್ಯಾಸ ಮಾಡುತ್ತಿದ್ದು, ಅರೆಕಾಲಿಕವಾಗಿ ಮಾರ್ಕೇಟಿಂಗ್ ನೌಕರಿ ಮಾಡುತ್ತಿರುತ್ತೇನೆ ಹಾಗೂ ಶ್ರೀ ರಾಹುಲ್. ಆರ್ 18 ವರ್ಷ*

ರವರು ಈತ ಸುಂಕದಕಟ್ಟೆಯ ಶಾಂತಿಧಾಮ ಕಾಲೇಜಿನಲ್ಲಿ ಬಿ.ಕಾಂ. ವ್ಯಾಸಂಗ ಮಾಡುತ್ತಿದ್ದಾನೆ. ನನ್ನ ತಾಯಿ ಭಾರತಿ ರವರು ಗೃಹರಕ್ಷಕದಳದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವರು ಸಹ ಸ್ತನ ಕ್ಯಾನ್ಸರ್‌ನಿಂದ ನರಳಿ ಈಗ ತಾನೇ ಚೇತರಿಸಿಕೊಂಡಿದ್ದರೂ ಅದಕ್ಕಾಗಿ ಸುಮಾರು ಸಾಲ ಮಾಡಿಕೊಂಡಿರುತ್ತಾರೆ. ನನ್ನ ತಮ್ಮ ರಾಹುಲ್ ಕೂಡ ಪ್ಯಾರಲಿಸಿಸ್‌ಗೆ ತುತ್ತಾಗಿ ಚೇತರಿಸಿಕೊಂಡಿದ್ದು, ಇನ್ನೂ ಚಿಕಿತ್ಸೆ ಪಡೆಯುತ್ತಿದ್ದಾನೆ ಹಾಗೂ ನನ್ನ ತಂದೆ ಟಿ.ಎ. ರಮೇಶ್ ರವರು ಗಾರ್ಮೆಂಟ್ಸ್ ಅಲ್ಲಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದರು ಇಷ್ಟರಲ್ಲಿಯೇ ನಮ್ಮ ತಂದೆ ತಾಯಿಯವರನ್ನು ಕಳೆದುಕೊಂಡು ನಾವು ತಬ್ಬಲಿಗಳಾಗಿದ್ದೇವೆ. ನಾವು ಈ ಮೇಲೆ ಕಾಣಿಸಿದ ವಿಳಾಸದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದು ನಮಗೆ ಯಾವುದೇ ರೀತಿಯ ಸ್ಥಿರಾಸ್ಥಿ/ಚರಾಸ್ಥಿಗಳು ಇರುವುದಿಲ್ಲ. ನಮ್ಮಿಬ್ಬರ ಪರಿಸ್ಥಿತಿಯನ್ನು ತಾವು ಅರ್ಥ ಮಾಡಿಕೊಂಡು ನಮ್ಮಿಬ್ಬರ ಭವಿಷ್ಯಕ್ಕಾಗಿ ಬಿ.ಬಿ.ಎಂ.ಪಿ.ಯಲ್ಲಿ ನೌಕರಿ ದಯಪಾಲಿಸಿಕೊಡಬೇಕೆಂದು ಕೋರಿರುತ್ತಾರೆ.

ಈ ಸಂಬಂಧವಾಗಿ ದಿನಾಂಕ: 08-09-2017ರಂದು ಜೆ.ಸಿ.ರಸ್ತೆಯಲ್ಲಿ ಕಾರಿನ ಮೇಲೆ ಮರ ಬಿದ್ದು, ಶ್ರೀ ರಮೇಶ್. ಟಿ.ಎ ಹಾಗೂ ಶ್ರೀಮತಿ ಭಾರತಿ ರವರುಗಳು ಮರಣ ಹೊಂದಿದ್ದ ಘಟನೆ ನಡೆದ ನಂತರ ಸ್ಥಳಕ್ಕೆ ಬೇಟಿ ನೀಡಿದ ಪೂಜ್ಯ ಮಹಾಪೌರರು ಹಾಗೂ ಮಾನ್ಯ ಆಯುಕ್ತರವರು ಪಾಲಿಕೆಯಲ್ಲಿ ನೌಕರಿಯನ್ನು ಕೊಡುವುದಾಗಿ ಭರವಸೆಯನ್ನು ನೀಡಿರುತ್ತಾರೆ.

ಕಾನೂನು ಕೋಶದ ಮುಖ್ಯಸ್ಥರವರ ವರದಿ ದಿನಾಂಕ: 28-09-218ರಂತೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಆಯುಕ್ತರವರ ಅವಗಾಹನೆಗೆ ತಂದು, ಸಂಬಂಧಪಟ್ಟ ಸ್ಥಾಯಿ ಸಮಿತಿ ಹಾಗೂ "ಘನ ಸರ್ಕಾರದ" ಮುಂದೆ ನೌಕರಿ ಕೊಡುವ ಬಗ್ಗೆ ಮುಂದಿನ ತೀರ್ಮಾನಕ್ಕಾಗಿ ಸಕ್ಷಮ ಪ್ರಾಧಿಕಾರವಾದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಪ್ರಸ್ತಾಪಿತ ವಿಷಯವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಅರ್ಜಿದಾರರಿಗೆ ಉದ್ಯೋಗ ನೀಡುವ ಬಗ್ಗೆ ಆಯುಕ್ತರು ಸರ್ಕಾರದೊಂದಿಗೆ ವ್ಯವಹರಿಸುವುದೆಂದು ಸಮಿತಿಯು ತೀರ್ಮಾನಿಸಿತು.**

## ವಿಷಯದ ಸಂಖ್ಯೆಃ ತೆಆಸ್ಥಾಸ/ 001 /2018-19

**ಆಯುಕ್ತರವರ ದಿನಾಂಕ 27-05-2019ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ,** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2019-20ನೇ ಸಾಲಿನ ಆಯವ್ಯಯ ಅಂದಾಜು ಉಲ್ಲೇಖ (1)ರ ಪಾಲಿಕೆಯ ಕೌನ್ಸಿಲ್ ಸಭೆಯ ಅನುಮೋದನೆ ವಿಷಯ ಸಂ:286/2018-19, ದಿನಾಂಕ 23-02-2019ರಂತೆ ರೂ.12,957.79 ಕೋಟಿಗಳ ಆಯವ್ಯಯವನ್ನು ಪಾಲಿಕೆಯ ಆರ್ಥಿಕ ಪರಿಸ್ಥಿತಿ ಹಿನ್ನೆಲೆಯಲ್ಲಿ ಹಾಗೂ ಸರ್ಕಾರ ವಾಸ್ತವಿಕ ಆಯವ್ಯಯವನ್ನು ಮಂಡಿಸಲು ಸೂಚಿಸಿದ ಮೇರೆಗೆ ರೂ.9,000.00 ಕೋಟಿಗಳಿಗೆ ಮಿತಿಗೊಳಿಸಿ, ಅನುಮೋದನೆ ನೀಡಲು ಕೋರಿ ಉಲ್ಲೇಖ (2)ರಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಉಲ್ಲೇಖ (3)ರ ಸರ್ಕಾರದ ಪತ್ರದಂತೆ "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2018-19ನೇ ಸಾಲಿನಲ್ಲಿ ಸರ್ಕಾರವು ರೂ.10,129.48 ಕೋಟಿಗಳ ಆಯವ್ಯಯಕ್ಕೆ ಸರ್ಕಾರ ಅನುಮೋದನೆ ನೀಡಿರುವ ಆಧಾರದ ಮೇಲೆ ಶೇ.15ರಷ್ಟು ಹೆಚ್ಚಿನ ಆಯವ್ಯಯವನ್ನು ಅಂದಾಜಿಸಿ, ಪಾಲಿಕೆಯ ಕೌನ್ಸಿಲ್‌ನ ಪ್ರಸ್ತಾಪಿತ ಆಯವ್ಯಯವನ್ನು ರೂ.11,648.90 ಕೋಟಿಗಳಿಗೆ ಮಿತಿಗೊಳಿಸಿ, ಅನುಮೋದಿಸಿದೆ. ಉಳಿಕೆ ಮೊತ್ತವಾದ ರೂ.1,308.89 ಕೋಟಿಗಳಿಗೆ ಬಿಬಿಎಂಪಿಯ ಪೂರಕ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿಕೊಳ್ಳುವಂತೆ ತಿಳಿಸಲಾಗಿರುತ್ತದೆ."

ಆದ್ದರಿಂದ, 2019-20ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯವನ್ನು ಕೌನ್ಸಿಲ್ ಅನುಮೋದನೆ ವಿಷಯ ಸಂ:286/2018-19, ದಿನಾಂಕ 23-02-2019ರಂತೆ ಅನುಮೋದನೆಯಾಗಿರುವ ಮೊತ್ತ

ರೂ.12,957.79 ಕೋಟಿಗಳನ್ನು ರೂ.11,648.90 ಕೋಟಿಗಳಿಗೆ ಮಿತಿಗೊಳಿಸಿ, ಪರಿಷ್ಕರಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ:-** **ಸರ್ಕಾರದ ಪತ್ರ ದಿನಾಂಕ 22-5-2019ರಂತೆ ಪಾಲಿಕೆಯ 2019-20ನೇ ಸಾಲಿನ ಆಯವ್ಯಯವನ್ನು ರೂ.11,648.90 ಕೋಟಿಗಳಿಗೆ ಮಿತಿಗೊಳಿಸಿ ಪರಿಷ್ಕರಿಸಲು ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿಯನ್ನು ಪರಿಶೀಲಿಸಿ, ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ ಅಗತ್ಯಕ್ಕೆ ತಕ್ಕಂತೆ ಪರಿಷ್ಕರಣೆ / ಮಾರ್ಪಾಡು ಮಾಡಲಾಗಿದೆ.**

1. **ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯ ಮತ್ತು ಕೌನ್ಸಿಲ್ ಸಭೆಯಲ್ಲಿ ಅನುಮೋದನೆ ನೀಡಿದ ಮೊತ್ತದಲ್ಲಿ ರೂ.1308.90 ಕೋಟಿಗಳ ಅನುದಾನವನ್ನು ಕಡಿತಗೊಳಿಸುವಂತೆ ಸರ್ಕಾರವು ನಿರ್ದೇಶಿಸಿದಂತೆ ರೂ.1308.90- ಕೋಟಿಗಳ ಅನುದಾನವನ್ನು ಕಡಿತಗೊಳಿಸಿ ರೂ.11,648.90 ಕೋಟಿಗಳಿಗೆ ಮಿತಿಗೊಳಿಸಿದೆ.**
2. **ದಿನಾಂಕ 31-5-2019 ರಂದು ನಡೆದ ಸಭೆಯಲ್ಲಿ ಹಾಜರಿದ್ದ ಮುಖ್ಯ ಲೆಕ್ಕಾಧಿಕಾರಿಗಳು ಚರ್ಚಿಸಿ ಸಮಿತಿಗೆ ತಿಳಿಸಿದಂತೆ, ಪಾಲಿಕೆಗೆ 4ನೇ ರಾಜ್ಯ ಹಣಕಾಸು ಆಯೋಗದ ಹೆಚ್ಚುವರಿ ಅನುದಾನ ರೂ.290.00 ಕೋಟಿಗಳನ್ನು 2019-20ನೇ ಸಾಲಿನ ಸ್ವೀಕೃತಿಯ ಒಟ್ಟು ಮೊತ್ತ ರೂ.11,648.90ರಲ್ಲಿ ಅಳವಡಿಸಿಕೊಳ್ಳಲಾಗಿದೆ.**
3. **ನಿಯಮನುಸಾರ ಪರಿಶಿಷ್ಟ ಜಾತಿ/ಪಂಗಡದ ಶೇ.24.10%, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಹಾಗೂ ದಿವ್ಯಾಂಗರಿಗೆ ಅವಶ್ಯಕವಾಗಿ ಒದಗಿಸಬೇಕಾದ ಅನುದಾನವನ್ನು ಅಗತ್ಯಕ್ಕೆ ತಕ್ಕಂತೆ ಒದಗಿಸುವುದು.**
4. **ಈಗಾಗಲೇ ಮಳೆಗಾಲವು ಪ್ರಾರಂಭವಾಗುತ್ತಿರುವ ಹಿನ್ನೆಲೆಯಲ್ಲಿ, ಅತಿತುರ್ತಾಗಿ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುವ ದೃಷ್ಟಿಯಿಂದ ಆಯವ್ಯಯವಕ್ಕೆ ಪರಿಷ್ಕರಣೆ / ಮಾರ್ಪಾಡಿನ ಅಂಕಿ ಅಂಶಗಳನ್ನು ಅಳವಡಿಸಿಕೊಂಡು 2019-20ನೇ ಸಾಲಿನ ಆಯವ್ಯಯವನ್ನು ಕೂಡಲೇ ಮುದ್ರಣಗೊಳಿಸಿ ವಿತರಿಸುವುದು ಹಾಗೂ ಕ್ರಿಯಾಯೋಜನೆಯನ್ನು ತಯಾರಿಸಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಆದೇಶವನ್ನು ಹೊರಡಿಸುವುದು.**
5. **ಪಾಲಿಕೆಯ 2019-20ನೇ ಸಾಲಿನ ಕೌನ್ಸಿಲ್ ನಿರ್ಣಯದ ಆಯವ್ಯಯದ ಒಟ್ಟು ಮೊತ್ತ ರೂ.12,957.79 ಕೋಟಿಗಳಿಂದ ರೂ.11,648.90 ಕೋಟಿಗಳಿಗೆ ಈ ಕೆಳಕಂಡಂತೆ ಅಗತ್ಯ ಪರಿಷ್ಕರಣೆ / ಮಾರ್ಪಾಡಿದ್ದು, ಆಯುಕ್ತರು ಅಗತ್ಯ ಕ್ರಮಕೈಗೊಳ್ಳುವುದೆಂದು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿತು.**
6. **ಉಳಿಕೆ ಮೊತ್ತ ರೂ.1308.89 ಕೋಟಿಗಳ ಮೊತ್ತದ ಕಾಮಗಾರಿಗಳಿಗೆ ಸರ್ಕಾರದ ನಿರ್ದೇಶನದಂತೆ ಪೂರಕ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿಕೊಳ್ಳುವುದೆಂದು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿತು.**

## ಆಯವ್ಯಯ 2019-2020ಕ್ಕೆ ಪರಿಷ್ಕರಣೆ / ಮಾರ್ಪಾಡು (ಸ್ವೀಕೃತಿಗಳು)

| ಕ್ರ.ಸ. | ಕೌನ್ಸಿಲ್ ನಿರ್ಣಯ ಅನುಬಂಧ-1 ಕ್ರ.ಸ | ಪುಟ ಕ್ರ.ಸ | ಲೆಕ್ಕ ಶೀರ್ಷಿಕೆ | ಪಾಲಿಕೆ ಸಭೆ ನಿರ್ಣಯ | ಕೌ.ನಿ.ಮೊತ್ತ (ರೂ.ಲಕ್ಷಗಳಲ್ಲಿ) | ಮರು ನಿಗಧಿ ಮೊತ್ತ (ರೂ.ಲಕ್ಷಗಳಲ್ಲಿ) | ವ್ಯತ್ಯಾಸದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|---|---|---|
| 1 | 1 | 7 | ಆರ್-0211 | ಆಸ್ತಿ ತೆರಿಗೆ | 400000.00 | 350000.00 | -50000.00 |
| 2 | 2 | 8 | ಆರ್-0003 | ಆರೋಗ್ಯಕರ | 60000.00 | 52500.00 | -7500.00 |
| 3 | 3 | 13 | ಆರ್-0004 | ಗ್ರಂಥಾಲಯಕರ | 24000.00 | 21000.00 | -3000.00 |
| 4 | 4 | 13 | ಆರ್-0001 | ಭಿಕ್ಷಾಟನೆ ಕರ | 12000.00 | 10500.00 | -1500.00 |
| 5 | 8 | 9 | ಆರ್-0130 | ಅಭಿವೃದ್ಧಿ ಶುಲ್ಕ | 60000.00 | 40000.00 | -20000.00 |

| | | | | | | | |
|---|---|---|---|---|---|---|---|
| 6 | 9 | 8 | ಆರ್-0191 | ಕೇಂದ್ರ ಸರ್ಕಾರದ ಕಟ್ಟಡಗಳ ಮೇಲಿನ ಸೇವಾ ಶುಲ್ಕ | 12500.00 | 7500.00 | -5000.00 |
| 7 | 10 | 8 | ಆರ್-0193 | ತೆರಿಗೆಯಿಂದ ವಿನಾಯಿತಿ ಪಡೆದ ಆಸ್ತಿಗಳ ಮೇಲೆ ಸೇವಾ ಶುಲ್ಕ | 10000.00 | 2500.00 | -7500.00 |
| 8 | 11 | 8 | ಆರ್.0133 | ಆಸ್ತಿ ತೆರಿಗೆ ತಡವಾಗಿ ಪಾವತಿಸುವವರ ಮೇಲೆ ದಂಡ | 50000.00 | 25000.00 | -25000.00 |
| 9 | 12 | 9 | ಆರ್-0131 | ಖಾತಾ ವರ್ಗಾವಣೆ ಶುಲ್ಕ | 20000.00 | 10000.00 | -10000.00 |
| 10 | 13 | 21 | ಆರ್-0109 | ಕಟ್ಟಡ ಪರವಾನಿಗೆ ಶುಲ್ಕ | 50000.00 | 25000.00 | -25000.00 |
| 11 | 14 | 21 | ಆರ್-0110 | ಕಾಂಪೌಂಡಿಗ್ ಶುಲ್ಕ | 30000.00 | 20000.00 | -10000.00 |
| 12 | 15 | 24 | ಅರ್-1033 | ಡಕ್ಟ್ ಸರ್ವೀಸಸ್ / ಓ.ಎಫ್.ಸಿ. ಶುಲ್ಕ | 30000.00 | 12500.00 | -17500.00 |
| 13 | 16 | 13 | ಆರ್-210 | ಅಧಿಬಾರ ಶುಲ್ಕ | 15000.00 | 50000.00 | 35000.00 |
| 14 | 17 | 22 | ಆರ್-1086 | ಭದ್ರತಾ ಠೇವಣಿ (ಮರುಪಾವತಿ-ನಗರಯೋಜನೆ) | 20000.00 | 20000.00 | 0 |
| 15 | 18 | 8 | ಆರ್-0194 | ಘನತ್ಯಾಜ್ಯ ನಿರ್ವಹಣೆಕರ | 25000.00 | 12000.00 | -13000.00 |
| 16 | - | - | ಹೊಸ ಶೀರ್ಷಿಕೆ | 4ನೇ ರಾಜ್ಯ ಹಣಕಾಸು ಆಯೋಗದ ಹೆಚ್ಚುವರಿ ಅನುದಾನ | 0.00 | 29000.00 | 29000.00 |
| 17 | 19 | 24 | ಆರ್-0007 | ಭದ್ರತಾಠೇವಣಿ (ಮರುಪಾವತಿ-ಓ.ಎಫ್.ಸಿ.) | 10000.00 | 10000.00 | 0 |
| 18 | 20 | 3 | ಆರ್-0008 | ಇತರೇ ಠೇವಣಿಗಳು | 6000.00 | 6111.00 | 111.00 |
| 19 | 23 | 3 | ಆರ್-0009 | ಭದ್ರತಾ ಠೇವಣಿಗಳು ಎಲ್ಲಾ ಇಲಾಖೆ | 15000.00 | 15000.00 | 0 |
| | | | | | 849500.00 | 718611.00 | -130889.00 |

## ಆಯವ್ಯಯ 2019-2020ಕ್ಕೆ ಪರಿಷ್ಕರಣೆ/ಮಾರ್ಪಾಡು (ಪಾವತಿಗಳು)

| ಕ್ರ.ಸ | ಕೌನ್ಸಿಲ್ ನಿರ್ಣಯ ಅನುಬಂಧ-2 ಕ್ರ.ಸ | ಆಯವ್ಯಯ ಪುಟ ಸಂಖ್ಯೆ | ಲೆಕ್ಕ ಶೀರ್ಷಿಕೆ | ಪಾಲಿಕೆ ಸಭೆ ನಿರ್ಣಯ | ಕೌ.ನಿ.ಮೊತ್ತ (ರೂ.ಲಕ್ಷಗಳಲ್ಲಿ) | ಮರು ನಿಗಧಿ ಮೊತ್ತ (ರೂ.ಲಕ್ಷಗಳಲ್ಲಿ) | ವ್ಯತ್ಯಾಸದ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|---|---|---|
| 1 | 9 | 187 | 0048 | ಕೊಡುಗೆಗಳು ಮತ್ತು ಸಹಾಯಧನ | 1500.00 | 800.00 | -700.00 |
| 2 | 16 | 129 | 3602 | ವಿಶೇಷ ಅಭಿವೃದ್ಧಿ ಕಾಮಗಾರಿಗಳು ವಾರ್ಡ್: 02, 06, 07, 08, 11, 12, 16, 21, 23, 24, 25, 30, 33, 37, 38, 40, 41, 42, 47, 48, 49, 50, 53, 54, 55, 56, 58, 59, 61, 62, 63, 66, 68, 72, 73, 75, 76, 77, 78, 81, 82, 84, 87, 91, 92, 94, 95, 98, 99, 106, 107, 110, 116, 117, 118, 120, 131, 134, 136, 140, 141, 145, 147, 148, 151, 152, 153, 157, 171, 172, 180, 190, 192, 197 ಮತ್ತು 198 ಒಟ್ಟು 75 ವಾರ್ಡ್‌ಗಳಿಗೆ ತಲಾ ರೂ.7.00 ಕೋಟಿಯಿಂದ ರೂ.3.00 ಕೋಟಿಗಳಿಗೆ ಪರಿಷ್ಕರಿಸಿದೆ. | 52500.00 | 22500.00 | -30000.00 |
| 3 | 18 | - | ಹೊಸ ಶೀರ್ಷಿಕೆ | ವಿಶೇಷ ಅಭಿವೃದ್ಧಿ ಕಾಮಗಾರಿಗಳು ವಾರ್ಡ್, 112, 113 ಪ್ರತಿ ವಾರ್ಡ್‌ಗೆ ರೂ.5.00ಕೋಟಿ ವಾರ್ಡ್ 169 ರೂ.3.00 ಕೋಟಿ | 1300.00 | 0.00 | -1300.00 |

| | | | | | | | |
|---|---|---|---|---|---|---|---|
| 4 | 21 | 131 | 1646 | ಕಿತ್ತೂರು ರಾಣಿ ಚೆನ್ನಮ್ಮ ಸ್ಟೇಡಿಯಂ ಅಭಿವೃದ್ಧಿ ಕಾಮಗಾರಿಗಳು | 1000.00 | 500.00 | -500.00 |
| 5 | 22 | - | ಹೊಸ ಶೀರ್ಷಿಕೆ | ಜಯನಗರ ವಾಣಿಜ್ಯ ಸಂಕೀರ್ಣದ ದುರಸ್ತಿ ಮತ್ತುಅಭಿವೃದ್ಧಿ | 1000.00 | 500.00 | -500.00 |
| 6 | 24 | - | ಹೊಸ ಶೀರ್ಷಿಕೆ | ವಾರ್ಡ್ 153ರ ಸಮಗ್ರ ಅಭಿವೃದ್ಧಿ ಕಾಮಗಾರಿಗಳು | 3000.00 | 1500.00 | -1500.00 |
| 7 | 35 | 117 | 3588 | ದಾಸರಹಳ್ಳಿ ರೂ.70.00 ರಿಂದ ರೂ.45.00 ಕೋಟಿ,<br>ಕೆ.ಆರ್.ಪುರ, ರೂ.50.00 ರಿಂದ ರೂ.15.00 ಕೋಟಿ)<br>ಜಯನಗರ, ರೂ.40.00 ರಿಂದ ರೂ.15.00 ಕೋಟಿ.<br>ಬಿ.ಟಿ.ಎಂ. ಬಡಾವಣೆ, ರೂ.40.00 ರಿಂದ ರೂ.20.00 ಕೋಟಿಗಳಿಗೆ<br>ರಾ.ರಾ.ನಗರ ರೂ.50.00 ಕೋಟಿಯಿಂದ ರೂ.25.00 ಕೋಟಿ<br>ಚಾಮರಾಜಪೇಟೆ ರೂ.25.00 ಕೋಟಿಯಿಂದ ರೂ.20.00 ಕೋಟಿ<br>ಹೆಬ್ಬಾಳ ರೂ.30.00 ಕೋಟಿಯಿಂದ ರೂ.35.00 ಕೋಟಿಗೆ<br>ಗೋವಿಂದರಾಜನಗರ ರೂ.20.00 ಕೋಟಿ | 32500.00 | 19500.00 | -13000.00 |
| 8 | - | 118 | 3589 | ವಿಜಯನಗರ, ಪುಲಕೇಶಿನಗರ, ಶಿವಾಜಿನಗರ, ಸರ್ವಜ್ಞನಗರ, ಶಾಂತಿನಗರ, ಬ್ಯಾಟರಾಯನಪುರ ಪ್ರತಿಕ್ಷೇತ್ರಕ್ಕೆ ರೂ.20.00 ಕೋಟಿ,<br>ಆನೇಕಲ್ ರೂ.2.00 ಕೋಟಿ<br>ಗಾಂಧೀನಗರ ರೂ.30.00 ಕೋಟಿಯಿಂದ ರೂ.25.00 ಕೋಟಿ<br>ಯಶವಂತಪುರ ರೂ.20.00 ಕೋಟಿಯಿಂದ ರೂ.25.00 ಕೋಟಿ, | 17200.00 | 17200.00 | 0.00 |
| 9 | 38 | 118 | 3590 | ಪದ್ಮನಾಭನಗರ ರೂ.15.00 ಕೋಟಿಯಿಂದ 10.00 ಕೋಟಿ<br>ಚಿಕ್ಕಪೇಟೆ ರೂ.15.00 ಕೋಟಿಯಿಂದ ರೂ.10.00 ಕೋಟಿರಾಜಾಜಿನಗರ ರೂ.10.00 ಕೋಟಿಯಿಂದ ರೂ.5.00 ಕೋಟಿ<br>ಮಲ್ಲೇಶ್ವರಂ ರೂ.10.00 ಕೋಟಿಯಿಂದ ರೂ.5.00 ಕೋಟಿ<br>ಬೆಂಗಳೂರು ದಕ್ಷಿಣ ರೂ.40.00 ರಿಂದ ರೂ.20.00 ಕೋಟಿ<br>ಬೊಮ್ಮನಹಳ್ಳಿ ರೂ.50.00 ರಿಂದ ರೂ.20.00 ಕೋಟಿ<br>ಯಲಹಂಕ ರೂ.10.00 ಕೋಟಿ,<br>ಬಸವನಗುಡಿ ರೂ.10.00 ಕೋಟಿ<br>ಮಹದೇವಪುರ ರೂ.10.00 ಕೋಟಿ<br>ಸಿ.ವಿ.ರಾಮನ್‌ನಗರ ರೂ.5.00 ಕೋಟಿ | 17500.00 | 10500.00 | -7000.00 |
| 10 | 48 | - | ಹೊಸ ಶೀರ್ಷಿಕೆ | ಹೊಸ ಕ್ವಾರಿಗಳ ಅಭಿವೃದ್ಧಿ | 2500.00 | 0.00 | -2500.00 |

| | | | | | | | |
|---|---|---|---|---|---|---|---|
| 11 | 52 | – | 3607 | ಬೃಹತ್ ಮಳೆ ನೀರುಗಾಲುವೆ ನಿರ್ವಹಣೆ | 1500.00 | 0.00 | –1500.00 |
| 12 | 54 | – | ಹೊಸ ಶೀರ್ಷಿಕೆ | ನಂದಿನಿ ಬಡಾವಣೆಯಲ್ಲಿ ನೇರ ಬಸ್ ಸಂಪರ್ಕ ಕಲ್ಪಿಸುವ ಸೇತುವೆ ನಿರ್ಮಾಣ. | 1000.00 | 0.00 | –1000.00 |
| 13 | 69 | – | ಹೊಸ ಶೀರ್ಷಿಕೆ | ಸಮಗ್ರ ಅಭಿವೃದ್ಧಿ ಕಾಮಗಾರಿಗಳು ವಾರ್ಡ್ ನಂ. 174, 185, 187, 154 193, ಪ್ರತಿ ವಾರ್ಡ್‌ಗೆ ರೂ.5.00 ಕೋಟಿಯಂತೆ ಒಟ್ಟು ರೂ.25.00 | 2500.00 | 0.00 | –2500.00 |
| 14 | 72 | – | ಹೊಸ ಶೀರ್ಷಿಕೆ | ವಾರ್ಡ್ 81 ಮತ್ತು 58 ರಲ್ಲಿ ವಿಶೇಷ ಅಭಿವೃದ್ಧಿ ಕಾಮಗಾರಿಗಳು ಪ್ರತಿ ವಾರ್ಡ್‌ಗೆ ರೂ.5.00 ಕೋಟಿ ಮೀಸಲಿರಿಸಿರುವುದನ್ನು ವಾರ್ಡ್ 81ಕ್ಕೆ ರೂ.4.00 ಕೋಟಿ ಮತ್ತು ವಾರ್ಡ್ 58ಕ್ಕೆ ರೂ.3.00 ಕೋಟಿಗೆ ಮಾರ್ಪಾಡಿಸಿದೆ. | 1000.0 | 700.0 | –300.0 |
| 15 | 72 | – | ಹೊಸ ಶೀರ್ಷಿಕೆ | ಕೆ.ಹೆಚ್.ರಸ್ತೆಯಲ್ಲಿನ ವಕ್ಫ್ ಆಸ್ತಿಯಲ್ಲಿ ಮೆಡಿಕಲ್ ಸೆಂಟರ್ ನಿರ್ಮಾಣ | 500.00 | 300.00 | –200.00 |
| 16 | 75 | – | ಹೊಸ ಶೀರ್ಷಿಕೆ | ಗೋವಿಂದರಾಜನಗರ ವಿಧಾನಸಭಾಕ್ಷೇತ್ರದಲ್ಲಿ ಆಸ್ಪತ್ರೆ ನಿರ್ಮಾಣ | 1000.00 | 0 | –1000.00 |
| 17 | 76 | – | ಹೊಸ ಶೀರ್ಷಿಕೆ | ವಾರ್ಡ್ 67 ರಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿ | 1500.00 | 500.00 | –1000.00 |
| 18 | 80 | 123 | 3505 | ವಿಶೇಷ ಅಭಿವೃದ್ಧಿ ಕಾಮಗಾರಿಗಳು ವಾರ್ಡ್ ನಂ. 101 ರೂ.5.00 ಕೋಟಿ, ವಾರ್ಡ್ 31 ರೂ.5.00 ಕೋಟಿ, ವಾರ್ಡ್ 70 ರೂ.10.00 ಕೋಟಿಯಂತೆ ಒಟ್ಟು ರೂ.20.00 ಕೋಟಿ ಮೀಸಲಿರಿಸಿರುವುದನ್ನು ಮಾರ್ಪಾಡಿಸಿ, ವಾರ್ಡ್ 70ಕ್ಕೆ ಮಾತ್ರ ರೂ.5.00 ಕೋಟಿ ಮೀಸಲಿರಿಸಿದೆ. | 2000.00 | 500.00 | –1500.00 |
| 19 | 82 | – | ಹೊಸ ಶೀರ್ಷಿಕೆ | ಮಾರಪ್ಪನಪಾಳ್ಯದಲ್ಲಿ ಪಾದಚಾರಿ ರಸ್ತೆಗಳ ಅಭಿವೃದ್ಧಿ | 500.00 | 0 | –500.00 |
| 20 | 84 | – | ಹೊಸ ಶೀರ್ಷಿಕೆ | ವಾರ್ಡ್ 29 ರಲ್ಲಿ ಅಭಿವೃದ್ಧಿ ಕಾಮಗಾರಿಗಳು | 5000.00 | 2000.00 | –3000.00 |
| 21 | 85 | – | ಹೊಸ ಶೀರ್ಷಿಕೆ | ವಾರ್ಡ್ 33 ರಲ್ಲಿ ಅಭಿವೃದ್ಧಿ ಕಾಮಗಾರಿಗಳು | 6000.00 | 4000.00 | –2000.00 |
| 22 | 87 | 51 | 311 | ಉದ್ಯಾನವನಗಳು ಭೂವಿನ್ಯಾಸ, ವೃತ್ತಗಳು, ಮೀಡಿಯನ್ಸ್‌ಗಳು ಮತ್ತು ಬುಲೇವಾರ್ಡ್‌ಗಳ ಅಭಿವೃದ್ಧಿ | 2000.00 | 1000.00 | –1000.00 |
| 23 | 88 | – | ಹೊಸ ಶೀರ್ಷಿಕೆ | ಅಭಿವೃದ್ಧಿ ಕಾಮಗಾರಿಗಳು ವಾರ್ಡ್ 22ಕ್ಕೆ ರೂ.10.00 ಕೋಟಿ, | 1000.00 | 500.00 | –500.00 |
| 24 | 89 | – | ಹೊಸ ಶೀರ್ಷಿಕೆ | ವಾರ್ಡ್ 18 ರಲ್ಲಿನ ಉದ್ಯಾನವನಗಳು, ಬುಲೇವಾರ್ಡ್‌ಗಳ ಅಭಿವೃದ್ಧಿ. | 500.00 | 300.00 | –200.00 |
| 25 | 90 | – | ಹೊಸ ಶೀರ್ಷಿಕೆ | ವಾರ್ಡ್ 108 ರಲ್ಲಿ ಅಭಿವೃದ್ಧಿ ಕಾಮಗಾರಿಗಳು | 300.00 | 0 | –300.00 |
| 26 | 91 | – | ಹೊಸ ಶೀರ್ಷಿಕೆ | ವಾರ್ಡ್ 128 ರಲ್ಲಿಅಭಿವೃದ್ಧಿ ಕಾಮಗಾರಿಗಳು | 500.00 | 300.00 | –200.00 |
| 27 | 93 | – | ಹೊಸ ಶೀರ್ಷಿಕೆ | ವಾರ್ಡ್ 46 ರಲ್ಲಿ ಅಭಿವೃದ್ಧಿ ಕಾಮಗಾರಿಗಳು | 500.00 | 0 | –500.00 |
| 28 | – | 95 | 1802 | ನೀರು ಸರಬರಾಜು (ವರ್ಷಕ್ಕೆ ದುರಸ್ತಿ ಮತ್ತು ನಿರ್ವಹಣೆ ಹಳೆ ವಾರ್ಡ್ | 4905.00 | 4995.00 | 90.00 |

| | | | | | | | |
|---|---|---|---|---|---|---|---|
| | | | | ಒಂದಕ್ಕೆ ರೂ.25 ಲಕ್ಷ ಹೊಸ ವಾರ್ಡ್ ಒಂದಕ್ಕೆ ರೂ.35 ಲಕ್ಷ ರೂ.4905.00 ರಿಂದ ರೂ.4995.00 ಲಕ್ಷ | | | |
| 29 | – | 95 | 1802 | ನೀರು ಸರಬರಾಜು (ವರ್ಷಕ್ಕೆ ದುರಸ್ತಿ ಮತ್ತು ನಿರ್ವಹಣೆ ಹಳೆ ವಾರ್ಡ್ ಒಂದಕ್ಕೆ ರೂ.25 ಲಕ್ಷ ಹೊಸ ವಾರ್ಡ್ ಒಂದಕ್ಕೆ ರೂ.35 ಲಕ್ಷ ರೂ.4905.00 ರಿಂದ ರೂ.4995.00 ಲಕ್ಷ | 995.00 | 905.00 | -90.00 |
| 30 | 96 | – | ಹೊಸ ಶೀರ್ಷಿಕೆ | ವಾರ್ಡ್ 74 ರಲ್ಲಿ ಅಭಿವೃದ್ಧಿ ಕಾಮಗಾರಿಗಳು | 1000.00 | 500.00 | -500.00 |
| 31 | 97 | – | ಹೊಸ ಶೀರ್ಷಿಕೆ | ನಂದಿನ ಬಡಾವಣೆಯಲ್ಲಿನ ಉದ್ಯಾನವನಗಳ ಅಭಿವೃದ್ಧಿ | 500.00 | 300.00 | -200.00 |
| 32 | 100 | – | ಹೊಸ ಶೀರ್ಷಿಕೆ | ವಾರ್ಡ್ 4 ರಲ್ಲಿನ ಉದ್ಯಾನವನದಲ್ಲಿ ಪಾತ್‌ವೇ ಮತ್ತು ಗ್ರಿಲ್ಸ್ ಅಳವಡಿಕೆ. | 200.00 | 0 | -200.00 |
| 33 | 104 | – | ಹೊಸ ಶೀರ್ಷಿಕೆ | ವಿಶೇಷ ಅಭಿವೃದ್ಧಿ ಕಾಮಗಾರಿಗಳು ವಾರ್ಡ್ 01, 02, 03, 04 ಪ್ರತಿ ವಾರ್ಡ್‌ಗೆ ರೂ.5.00 ಕೋಟಿ | 2000.00 | 0 | -2000.00 |
| 34 | 107 | – | ಹೊಸ ಶೀರ್ಷಿಕೆ | ತಿಲಕ್‌ನಗರ ಬ್ಲಾಕ್-1 ರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ವರ್ಗದವರಿಗೆ ಬಹುಮಹಡಿ ವಸತಿ ಸಂಕೀರ್ಣ ನಿರ್ಮಾಣ | 1000.00 | 500.00 | -500.00 |
| 35 | 108 | – | ಹೊಸ ಶೀರ್ಷಿಕೆ | ತಿಲಕ್‌ನಗರ ಬ್ಲಾಕ್-2 ರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ವರ್ಗದವರಿಗೆ ಬಹುಮಹಡಿ ವಸತಿ ಸಂಕೀರ್ಣ ನಿರ್ಮಾಣ | 1000.00 | 500.00 | -500.00 |
| 36 | 109 | – | ಹೊಸ ಶೀರ್ಷಿಕೆ | ಜಯನಗರ ವಿಧಾನಸಭಾಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ/ಪಂಗಡದವರಿಗೆ ವೈಯಕ್ತಿಕ ಮನೆ ನಿರ್ಮಾಣ | 1000.00 | 500.00 | -500.00 |
| 37 | 110 | – | ಹೊಸ ಶೀರ್ಷಿಕೆ | ಬಿ.ಟಿ.ಎಂ. ಬಡಾವಣೆ ವಿಧಾನಸಭಾಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ/ಪಂಗಡದವರಿಗೆ ವೈಯಕ್ತಿಕ ಮನೆ ನಿರ್ಮಾಣ | 1000.00 | 500.00 | -500.00 |
| 38 | 111 | – | ಹೊಸ ಶೀರ್ಷಿಕೆ | ಬಿ.ಟಿ.ಎಂ. ವ್ಯಾಪ್ತಿಯ ಪರಿಶಿಷ್ಟ ಜಾತಿ/ಪಂಗಡ ಪ್ರದೇಶ, ರಾಜೇಂದ್ರನಗರ ಸ್ಲಂ, ಎ.ಕೆ.ಕಾಲೋನಿ ಪ್ರದೇಶದಲ್ಲಿ ಅಂಗನವಾಡಿ ಶಾಲೆ ಮತ್ತು ಸಮುದಾಯ ಭವನ ನಿರ್ಮಾಣ. | 1500.00 | 500.00 | -1000.00 |
| 39 | 112 | – | ಹೊಸ ಶೀರ್ಷಿಕೆ | ಕೆ.ಆರ್.ಪುರಂ ವಿಧಾನಸಭಾಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ/ ಪಂಗಡದವರಿಗೆ ವೈಯಕ್ತಿಕ ಮನೆ ನಿರ್ಮಾಣ | 2000.00 | 500.00 | -1500.00 |
| 40 | 113 | – | ಹೊಸ ಶೀರ್ಷಿಕೆ | ಯಶವಂತಪುರ ವಿಧಾನಸಭಾಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ/ಪಂಗಡದವರಿಗೆ ವೈಯಕ್ತಿಕ ಮನೆ ನಿರ್ಮಾಣ | 2000.00 | 500.00 | -1500.00 |
| 41 | | – | ಹೊಸ ಶೀರ್ಷಿಕೆ | ದಾಸರಹಳ್ಳಿ ವಿಧಾನಸಭಾಕ್ಷೇತ್ರದಲ್ಲಿ ಪರಿಶಿಷ್ಟ ಜಾತಿ/ಪಂಗಡದವರಿಗೆ ವೈಯಕ್ತಿಕ ಮನೆ ನಿರ್ಮಾಣ | 1000.00 | 500.00 | -500.00 |
| 42 | 114 | – | 3157 | ಯಶವಂತಪುರದ ಹಿಂದುಳಿದ ವರ್ಗಗಳ / ಅಲ್ಪಸಂಖ್ಯಾತರ / ಆರ್ಥಿಕ ಹಿಂದುಳಿದ ವರ್ಗದವರಿಗೆ ವೈಯಕ್ತಿಕ | 1000.00 | 500.00 | -500.00 |

| | | | | | | | |
|---|---|---|---|---|---|---|---|
| | | | | ಮನೆ ನಿರ್ಮಾಣ 2ನೇ ಹಂತ ವಾರ್ಡ್ 37. | | | |
| 43 | 115 | – | ಹೊಸ ಶೀರ್ಷಿಕೆ | ರಾಜರಾಜೇಶ್ವರಿನಗರ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ / ಪಂಗಡದವರ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳು | 3000.00 | 2000.00 | –1000.00 |
| 44 | 116 | – | ಹೊಸ ಶೀರ್ಷಿಕೆ | ಮಹಾಲಕ್ಷ್ಮೀ ವಿಧಾನಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ/ ಪಂಗಡದವರ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳು | 1000.00 | 500.00 | –500.00 |
| 45 | 118 | – | ಹೊಸ ಶೀರ್ಷಿಕೆ | ವಾರ್ಡ್ 44 ರಲ್ಲಿ ಎಸ್.ಸಿ/ಎಸ್.ಟಿ ವರ್ಗದವರಿಗೆ ಮನೆ ನಿರ್ಮಾಣ. | 1000.00 | 500.00 | –500.00 |
| 46 | 120 | – | ಹೊಸ ಶೀರ್ಷಿಕೆ | ವಾರ್ಡ್ 33 ರಲ್ಲಿ ಹಿಂದುಳಿದ/ ಅಲ್ಪಸಂಖ್ಯಾತರವರಿಗೆ ವೈಯಕ್ತಿಕ ಮನೆ ನಿರ್ಮಾಣ. | 1000.00 | 500.00 | –500.00 |
| 47 | 121 | – | ಹೊಸ ಶೀರ್ಷಿಕೆ | ವಾರ್ಡ್ 33 ರಲ್ಲಿ ಹಿಂದುಳಿದ/ ಅಲ್ಪಸಂಖ್ಯಾತ ವರ್ಗದ ಮನೆಗಳಿಗೆ ಸೋಲಾರ್ ಮತ್ತು ಎಲ್.ಇ.ಡಿ. ವಿದ್ಯುತ್ ಒದಗಿಸುವುದು. | 100.00 | 0.00 | –100.00 |
| 48 | 124 | – | 2340 | ಆರ್ಥಿಕವಾಗಿದುರ್ಬಲ ವರ್ಗದವರಿಗೆ ಮನೆಗಳ ನಿರ್ಮಾಣ(ರೂ.5.00 ಲಕ್ಷ ಪ್ರತಿ ಮನೆಗೆ) ಚಾಲ್ತಿ ಕಾಮಗಾರಿಗಳು | 11500.00 | 5000.00 | –6500.00 |
| 49 | 124 | – | 2340 | ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಮನೆಗಳ ನಿರ್ಮಾಣ (ರೂ.5.00 ಲಕ್ಷ ಪ್ರತಿ ಮನೆಗೆ) ಮುಂದುವರೆದ ಕಾಮಗಾರಿಗಳು | 9700.00 | 7500.00 | –2200.00 |
| 50 | – | 178 | 3612 | ಎಸ್.ಸಿ./ಎಸ್.ಟಿ. ವಾಸಿಸುವ ಪ್ರದೇಶದಲ್ಲಿ ಆರ್.ಓ.ಪ್ಲಾಂಟ್‌ಗಳ ನಿರ್ಮಾಣ ಕಾಮಗಾರಿ ಪ್ರತಿ ವಾರ್ಡ್‌ಗೆ ರೂ.15.00 ಲಕ್ಷ | 3000.00 | 0.00 | –3000.00 |
| 51 | – | – | ಹೊಸ ಶೀರ್ಷಿಕೆ | ಪರಿಶಿಷ್ಟ ಜಾತಿ/ಪಂಗಡದವರು ವಾಸಿಸುತ್ತಿರುವ ಗೊಟ್ಟಿಗೆರೆ ವಾರ್ಡ್ ಪ್ರದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳು | 0 | 500.00 | 500.00 |
| 52 | 125 | | 1878 | ಮೂಲಭೂತ ಸೌಕರ್ಯಗಳು (ಸಮುದಾಯ ಕಾರ್ಯಕ್ರಮ) ಚಾಲ್ತಿ ಕಾಮಗಾರಿಗಳು | 19100.00 | 11000.00 | –8100.00 |
| 53 | 125 | – | 1878 | ಮೂಲಭೂತ ಸೌಕರ್ಯಗಳು (ಸಮುದಾಯ ಕಾರ್ಯಕ್ರಮ) ಮುಂದುವರೆದ ಕಾಮಗಾರಿಗಳು | 17100.00 | 12100.00 | –5000.00 |
| 54 | 126 | – | 1938 | ವಿಕಲಚೇತನರು ಹಾಗೂ ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳು ಚಾಲ್ತಿ ಕಾಮಗಾರಿಗಳು | 9860.00 | 5970.00 | –3890.00 |
| 55 | 127 | – | 224 | ಪೌರಕಾರ್ಮಿಕರ, ಗ್ಯಾಂಗ್‌ಮನ್‌ಗಳ ಮತ್ತು ತೋಟಗಾರಿಕೆ ಮಾಲಿಗಳ ಮಕ್ಕಳಿಗೆ ವಿದ್ಯಾರ್ಥಿಕ ವೇತನ | 2000.00 | 1500.00 | –500.00 |
| 56 | 128 | – | 2020 | ವ್ಯಕ್ತಿಗತ ಸೌಲಭ್ಯಗಳಿಗೆ ಸಹಾಯಧನ | 3300.00 | 700.00 | –2600.00 |
| 57 | – – | 82 | 3362 | ಸುಬ್ರಮಣ್ಯಪುರ, ಲಿಂಗದೀರನಹಳ್ಳಿ, ಕನ್ನಹಳ್ಳಿ ಹಾಗೂ ಸೀಗೇಹಳ್ಳಿಯಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕಗಳ | 1500.00 | 1000.00 | –500.00 |

| | | | | | | | |
|---|---|---|---|---|---|---|---|
| | | | | ಅಭಿವೃದ್ಧಿ– ಚಾಲ್ತಿ ಕಾಮಗಾರಿಗಳು | | | |
| 58 | – | 82 | 2223 | ಮಂಡೂರು ಮತ್ತು ಮಾವಳ್ಳಿಪುರದ ಘನತ್ಯಾಜ್ಯ ವಿಲೇವಾರಿ ಘಟಕದ ಸುತ್ತಮುತ್ತಲಿನ ಹಳ್ಳಿಗಳ ಅಭಿವೃದ್ಧಿ– ಚಾಲ್ತಿ ಕಾಮಗಾರಿಗಳು | 2000.00 | 1000.00 | –1000.00 |
| 59 | – | 83 | 3162 | ದೊಡ್ಡಬಿದರೆಕಲ್ಲು ಘನತ್ಯಾಜ್ಯ ವಿಲೇವಾರಿ ಘಟಕದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿ–ಚಾಲ್ತಿ ಕಾಮಗಾರಿಗಳು | 1500.00 | 1000.00 | –500.00 |
| 60 | – | 83 | 3582 | ಕೆ.ಸಿ.ಡಿ.ಸಿ. ಸುತ್ತಮುತ್ತಲಿನ ಪ್ರದೇಶಗಳ ಅಭಿವೃದ್ಧಿ ಕಾಮಗಾರಿಗಳು | 2000.00 | 1000.00 | –1000.00 |
| 61 | – | 83 | 3583 | ಮಂಡೂರು ಸುತ್ತಮುತ್ತಲಿನ ಪ್ರದೇಶಗಳ ಅಭಿವೃದ್ಧಿ ಕಾಮಗಾರಿಗಳು | 2000.00 | 1000.00 | –1000.00 |
| 62 | 37 | 83 | 3584 | ಬೆಳ್ಳಳ್ಳಿ ಕ್ವಾರಿಯ ಸುತ್ತಮುತ್ತ ಪ್ರದೇಶಗಳ ಅಭಿವೃದ್ಧಿ ಕಾಮಗಾರಿಗಳು | 3000.00 | 1500.00 | –1500.00 |
| 63 | 5 | 64 | 3028 | ಹಾಲಿ ಇರುವ ಕೆರೆಗಳ ನಿರ್ವಹಣೆ ಸುಧಾಣೆ | 4000.00 | 2500.00 | –1500.00 |
| 64 | – | 180 | 3627 | ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಮನೆಗಳ ನಿರ್ಮಾಣ ವಾರ್ಡ್ 102 ರೂ.3.00 ಕೋಟಿಯಿಂದ ರೂ.8.00 ಕೋಟಿ, ವಾರ್ಡ್ 74, 44, 67, 68, 75, 43 ಪ್ರತಿ ವಾರ್ಡ್‌ಗೆ ರೂ.2.00 ಕೋಟಿ | 1500.00 | 2000.00 | 500.00 |
| 65 | – | 176 | 3557 | ದೇವರಜೀವನಹಳ್ಳಿಯ ಎಸ್.ಸಿ../ಎಸ್.ಟಿ ಜನರು ವಾಸಿಸುವ ಪ್ರದೇಶದಲ್ಲಿ ವಿಶೇಷ ಅಭಿವೃದ್ಧಿ ಕಾಮಗಾರಿಗಳು – ಮುಂದುವರೆದ ಕಾಮಗಾರಿಗಳು | 1500.00 | 1000.00 | –500.00 |
| 66 | – | 175 | 2021 | ವ್ಯಕ್ತಿಗತ ಸೌಲಭ್ಯಗಳಿಗೆ ಸಹಾಯಧನ (ಪ್ರತಿ ಮನೆಗೆ ರೂ.5.00 ಲಕ್ಷ) ಪ.ಜಾ/ಪ.ಪಂ – ಮುಂದುವರೆದ ಕಾಮಗಾರಿಗಳು | 10200.00 | 8800.00 | –1400.00 |
| 67 | 105 | 49 | 0193 | ಭಿಕ್ಷುಕರಕರ | 12000.00 | 10500.00 | –1500.00 |
| 68 | 106 | 49 | 0194 | ಗ್ರಂಥಾಲಯಕರ | 24000.00 | 21000.00 | –3000.00 |
| | | | | **ಒಟ್ಟು ರೂ.** | **323760.00** | **192870.00** | **–130890.00** |

**(ಎಸ್.ಪಿ. ಹೇಮಲತಾ)**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**